ಸಂಪಾದನೆ ಇಲ್ಲದೆ ಕಂಗಾಲಾಗತೊಡಗಿದ್ದ. ಅಂಥ ಸಂದರ್ಭದಲ್ಲಿ ಅವನನ್ನು ತನ್ನೊಟ್ಟಿಗೆ ಸೇರಿಸಿಕೊಂಡವರು ನರಸಿಂಹಣ್ಣ.

ಆ ಕಾಲದಲ್ಲಿ ನರಸಿಂಹಣ್ಣ ಭಾರಿ ದೊಡ್ಡ ಸೈಂಪಾಗದವರು. ಅವರ ಗರಡಿಯಲ್ಲಿ ಪಳಗಿದ ವಾದಿರಾಜ ಬಹಳ ಬೇಗ ಪ್ರಸಿದ್ಧಿಗೆ ಬಂದ. ಕಾಲಾನಂತರದಲ್ಲಿ ತನ್ನದೇ ಒಂದಷ್ಟು ಜನ್ರನ್ನು ಸೇರಿಸಿ ಅಡುಗೆ ಮಾಡುವ ಒಂದೆರಡು ಟೀಂಗಳನ್ನು ಕಟ್ಟಿಕೊಂಡ. ಇದರಿಂದಾಗಿ ಅವನಿಗೆ ಸಂಪಾದನೆ ತಕ್ಕಮಟ್ಟಿಗೆ ಚೆಂದವೇ ಆಗ್ತಾ ಇತ್ತು. ಸ್ವಂತಕ್ಕೆ ಅಂತ ಐದು ಸೆಂಟ್ಸ್ ಜಾಗ ತೆಕ್ಕೊಂಡು ಒಂದು ಸಣ್ಣ ಮನೆ ಕಟ್ಟಿಸಿದ್ದ. ದೊಡ್ಡ ಮಗಳು ಇಂಜಿನಿಯರಿಂಗ್ ಮುಗಿಸಿ ಬೆಂಗ್ಳೂರಲ್ಲಿ ಕೆಲಸಕ್ಕೆ ಸೇರಿದ್ದಿದ್ಲು. ಸಣ್ಣವಳು ಪೇಟೆಯಲ್ಲಿ ಡಿಗ್ರಿ ಓತ್ತಾ ಇದ್ಲು.

ವಿಷಯ ಹೀಗಿರಲಾಗಿ, ಮಾರ್ಚ್ ತಿಂಗಳ ಅಂತ್ಯದಲ್ಲಿ ಕೊರೊನಾ ಲಾಕ್‌ಡೌನ್ ಅಂತ ಘೋಷಣೆ ಮಾಡಿದಾಗ ಎಲ್ಲವೂ ತಿರುಗಾಮುರುಗಾ ಆಗ್ಲಿಕ್ಕೆ ಸುರುವಾಯಿತು. ಏಪ್ರಿಲ್, ಮೇಯಲ್ಲಿ ಮದುವೆ, ಮೊದಲಾದ ಶುಭ ಸಮಾರಂಭಗಳಿಗೆ ಅಂತ ಬುಕ್ ಆಗಿದ್ದ ಅಡುಗೆ ಕಾಂಟ್ರಾಕ್ಟ್ ಎಲ್ಲ ಕ್ಯಾನ್ಸಲ್ ಆದವು. ದಿನಾ ಒಬ್ಬೊಬ್ರೇ ಫೋನ್ ಮಾಡಿ ಅಥವಾ ಮನೆಗೆ ಬಂದು ಕೊಟ್ಟ ಅಡ್ವಾನ್ಸ್ ಅನ್ನು ವಾಪಾಸ್ ಕೇಳ್ಲಿಕ್ಕೆ ಸುರು ಮಾಡಿದ್ರು. ವಾದಿರಾಜನದ್ದು ಅಂಥದ್ರಲ್ಲೆಲ್ಲ ತುಂಬ ನಿಯತ್ತು. ಅವರು ಕೊಟ್ಟ ಎಡ್ವಾನ್ಸ್ ಬೇರೆ ಎಂಥದಕ್ಕೋ ಖರ್ಚಾಗಿದ್ರೂ ಸೈತ ಯಾರ ಯಾರ ಹತ್ರವೋ ಸಾಲ ಮಾಡಿ ದುಡ್ಡನ್ನು ವಾಪಾಸ್ ಮಾಡಿದ. ಮೇ ತಿಂಗಳ ಹೊತ್ತಿಗೆ ಬೆಂಗ್ಳೂರಲ್ಲಿ ಕೆಲಸ ಮಾಡ್ತಾ ಇದ್ದ ಮಗಳು ಸಾ, 'ಅಪ್ಪಾ... ನಮ್ಮ ಕಂಪೆನಿ ಮುಚ್ಚಿದ್ದಾರೆ. ಈಗ ಸದ್ಯ ಕೆಲಸ ಇಲ್ಲ' ಅಂತ ಕೂಗಿಕೊಂಡು ಮನೆಗೆ ವಾಪಸ್ ಬಂದ್ಲು. ಅವನಿಗೆ ತಲೆ ಮೇಲೆ ಚಪ್ಪಡಿ ಕಲ್ಲು ಬಿದ್ದ ಹಾಗೆ ಆಯಿತು. ಚೂರು ಪಾರು ಖರ್ಚಿಗೆ ಮಗಳು ದುಡ್ಡು ಕಳಿಸ್ತಿದ್ಲು. ಈಗ ಅದು ಸಾ ನಿಂತಿತು. ಮನೆಯಲ್ಲಿ ಅಕ್ಕಿ ಬೇಳೆ ತರಕಾರಿ ಎಲ್ಲ ಖಾಲಿ ಖಾಲಿ. ಸಂಪಾದನೆ ನಯಾ ಪೈಸೆ ಇಲ್ಲ. ಕೂಡಿಟ್ಟದ್ದು ಚೂರು ಚೂರೇ ಕರಗ್ತಾ ಉಂಟು. ಅದೂ ಹೆಚ್ಚು ದಿನ ಬರ್ಲಿಕ್ಕಿಲ್ಲ. ಯೆಂತ ಮಾಡುದು? ಮನೆ ಬಿಟ್ಟು ಆಚೆ ಹೋಗ್ಲಿಕ್ಕಿಲ್ಲ. ಎಂಥಾದಾದ್ರೂ ತಡ್ಕೊಂಡಾನು ಹಸಿವೆಯನ್ನು, ಸ್ವಾಭಿಮಾನಕ್ಕೆ ಪೆಟ್ಟು ಬೀಳುವುದನ್ನು ಅವ ತಡ್ಕೊಳ್ಳಲಾರ. ಅಂಥೊಂದು ಪ್ರಸಂಗ ಆವತ್ತು ರಾತ್ರಿ ನಡೀತು.

ಅವ ಊಟಕ್ಕೆ ಅಂತ ಕೂತಿದ್ದ. ಅನ್ನದ ಪಾತ್ರೆ ಎದುರಿಗೆ ಧಡಕ್ಕಂತ ಇಟ್ಟ ಹೆಂಡತಿ, 'ನನ್ನ ಕರ್ಮ! ನಿಮ್ಮನ್ನು ಕಟ್ಟಿಕೊಂಡು ಇಷ್ಟು ವರ್ಷ ಆಯ್ತು, ಒಂದು ದಿನ ಸುಖ ಕಾಣ್ಲಿಲ್ಲ. ಸುಖ ಕಾಣುವ ಸಮಯಕ್ಕೆ ಇದೊಂದು ದರಿದ್ರ ಬಂದು ವಕ್ಕರಿಸಿತು. ನಿಮಿಗಂತೂ ಮನೆಯವರ ಯಾರ ಚಿಂತೆ ಸಾ ಇಲ್ಲ. ಕೇಳಿದವರಿಗೆಲ್ಲ ಎಡ್ವಾನ್ಸ್ ನಿಯತ್ತಿನಿಂದ ವಾಪಾಸ್ ಕೊಟ್ರಿ. ಇನ್ನು ಯೆಂತ ಮಾಡ್ತೀರಿ ಹೊಟ್ಟೆಗೆ? ಸರ್ಕಾರದವರು ಕಿಟ್ ಕೊಡ್ತಾ ಇದ್ದಾರಂತೆ ಅದನ್ನಾದ್ರೂ ತಂದು ಕೊಡಿ. ಅಕ್ಕಿ ಬೇಳೆ ಸಾಬೂನು ಅಂಥದಾದ್ರೂ ಸಿಕ್ಕಿದ್ರೆ ನಾಕು ದಿನ ಬದುಕಬಹುದು' ಅಂತ ವಟವಟ ಅಂದ್ಲು. 'ಬರೀ ಅನ್ನ ಮಾತ್ರ ಉಂಟು. ಹುಳಿ, ಸಾರು ಎಂಥದೂ ಇಲ್ವಾ?' ಅಂತ ಅವ ಕೇಳಿದ. 'ಹುಳಿ!?, ಸಾಂಬಾರು!? ಎಂತ ತಂದು ಗುಡ್ಡೆ ಹಾಕಿದ್ದಿರಿ ಇಲ್ಲಿ? ಯೆಂತ ಉಂಟು ಅಂತ ಬೇಕಲ್ವಾ? ನಿಮಿಗೆ ಹೊತ್ತಿಗೆ ಸರಿಯಾಗಿ ರುಚಿ ರುಚೀದ್ದು ತಿನ್ಬೇಕೂತಾಂದ್ರೆ ಹೋಗಿ ಪೇಟೆಗೆ. ಅಲ್ಲಿ ಸರ್ಕಾರದವರು ನಿರ್ಗತಿಕರಿಗೆ ಮೂರು ಹೊತ್ತು ರುಚಿ ರುಚೀದ್ದು ಮಾಡಿ ಹಾಕ್ತಾರಂತೆ. ನೀವೂ ಅಲ್ಲೇ ತಿನ್ನಿ. ನನ್ನ ಹತ್ರ ಇಷ್ಟೇ ಮಾಡ್ಲಿಕ್ಕೆ ಆಗುದು' ಅಂತ ಜೋರು ಮಾಡಿದ್ಲು. ವಾದಿರಾಜನಿಗೆ ಅನ್ನ ಗಂಟಲಲ್ಲಿ ಇಳೀಲಿಲ್ಲ. ಕಷ್ಟಪಟ್ಟು ತಲೆ ಬಗ್ಗಿಸಿ ಕೂತ್ಕೊಂಡು ನೀರಿನೊಂದಿಗೆ ನುಂಗಿ ಊಟ ಮುಗಿಸಿ ಎದ್ದ. ಅವತ್ತು ರಾತ್ರಿ ಇಡೀ ನಿದ್ರೆ ಬರದೆ ಹೊರಳಾಡಿದ. ತಾನಂತು ಮನೆ ಮಂದಿಗೆ ಬೇಡವಾಗಿದ್ದೇನೆ. ಹಾಗಂತ ಕೆರೆಯೋ ಬಾವಿಯೋ ನೋಡುವುದೋ, ಅದು ಸಾ ಸರಿಯಲ್ಲ. ಬದುಕಿರುವಷ್ಟು ದಿನ ಹೊಟ್ಟೆ ತುಂಬಬೇಕಲ್ವ? ಅವನಿಗೂ ಯಾರೋ ಹೇಳಿದ್ದರು, ಪೇಟೆಯಲ್ಲಿ ಕೊರೊನಾದ ಲಾಕ್‌ಡೌನ್‌ನಿಂದ ಕಷ್ಟದಲ್ಲಿ ಇರುವ ಪಾಪದವರಿಗೆ



ಸರ್ಕಾರದವರು ಮೂರುಹೊತ್ತು ಧರ್ಮಕ್ಕೆ ಊಟ ತಿಂಡಿ ಕೊಡ್ತಾರೆ ಅಂತ. ಹೆಂಡತಿ ಸಾ ಅದನ್ನೇ ಹೇಳಿ ಕುಚ್ಚಣೆಸಿದಳಲ್ವಾ? ಸರಿ ಹಾಗೆಯೇ ಮಾಡ್ತೇನೆ ಅಂತ ಒಂದು ನಿರ್ಧಾರಕ್ಕೆ ಬಂದ.

ಬೆಳಿಗ್ಗೆ ಎಲ್ಲರೂ ಏಳುವ ಮೊದಲೇ ಎದ್ದು, 'ನನ್ನನ್ನು ಯಾರೂ ಹುಡುಕುವುದು ಬೇಡ. ಮನೆ ಬಿಟ್ಟಿದ್ದೇನೆ' ಅಂತ ಚೀಟಿ ಬರೆದು ಇಟ್ಟು ಸೈಕಲ್ ಹತ್ತಿ ಪೇಟೆ ಕಡೆಗೆ ಹೊರಟಿದ್ದ. ಹಾಗೆ ಹೊರಟು ಬಂದವ ಈ ಕತೆಯ ಸುರುವಿಗೆ ಹೇಳಿದಂತೆ ಸರ್ಕಾರದವರು ನಡೆಸುತ್ತಿದ್ದ ಆ ಕ್ಯಾಂಟೀನಿನಲ್ಲಿ ಬೆಳಗ್ಗಿನ ತಿಂಡಿ ತಿಂದಿದ್ದ.

ಕಟ್ಟೆಯ ಮೇಲೆ ಕೂತವನಿಗೆ ತಂಪುಗಾಳಿ ಬೀಸಿದಾಗ ಜೊಂಪು ಹತ್ತಿತ್ತು. ಒಳ್ಳೆ ನಿದ್ರೆ ಬಂತು. ಎಚ್ಚರಿಕೆ ಆದಾಗ ತುಂಬ ಜನ ಮಾತಾಡುದು ಕೇಳಿತು. ಎಂಥದಿದು ಗಲಾಟೆ? ಅಂತ ನೋಡಿದ. ಆಗಲೇ ಊಟಕ್ಕೆ ತುಂಬ ಜನ ಒಂದೊಂದು ಮೀಟರ್ ದೂರದಲ್ಲಿ ಸಾಲುಗಟ್ಟಿ ನಿಂತಾಗಿದೆ. ವಾಚು ನೋಡಿದ ಹನ್ನೆರಡು ದಾಟಿದೆ. ತಾನು ಸಾ ಕ್ಯೂನಲ್ಲಿ ನಿಲ್ಬೇಕು ಅಂತ ಓಡಿ ಹೋಗಿ ನಿಂತ. ಈಗ ಸೆಕ್ಯೂರಿಟಿಯವರು ಮೂವರು ಇದ್ರು. ಅವರದ್ದು ಎಲ್ರಿಗೂ ಜೋರೇ ಜೋರು. ರಣ ಬಿಸಿಲು ಬೇರೆ. ನಿಂತು ನಿಂತು ಕಾಲು ಬಚ್ಚಿತು. ಒಂದು ಗಂಟೆ ಹೊತ್ತಿಗೆ ಊಟ ಕೊಡ್ಲಿಕ್ಕೆ ಸುರು ಮಾಡಿದ್ರು. ಮಾರುದ್ದ ಕ್ಯೂ ಆಮೆಯ ಹಾಗೆ ನಿಧಾನಕ್ಕೆ ಸಾಗ್ತಾ ಇತ್ತು. ಗ್ರಾಚಾರಕ್ಕೆ ಇವನ ಸರದಿ ಬಂದಾಗ ಅನ್ನ ಖಾಲಿ! ಸಾಂಬಾರು ಮಾತ್ರ ಇತ್ತು. ಬಡಿಸುವವ ಪಿಳಿಪಿಳಿ ಕಣ್ಣು ಬಿಟ್ಟ. 'ಅನ್ನ ಮಾಡಿ ಬಡಿಸ್ತೀರಾ?' ವಾದಿರಾಜ ಮರ್ಯಾದೆ ಬಿಟ್ಟು ಕೇಳಿದ. 'ಇಷ್ಟು ಮಾಡೂದೇ ಹೆಚ್ಚು. ಇದ್ರ ಮೇಲೆ ಮತ್ತೊಂದು ಸರ್ತಿ ಅನ್ನ ಮಾಡ್ಬೇಕಾ? ಬೇಕಾದ್ರೆ ಸಾಂಬಾರ್ ಕುಡೀರಿ. ಇಲ್ಲಂತಾದ್ರೆ ಹೋಗಿ' ಅಡುಗೆ ಮನೆಯ ಒಳಗಿಂದ ಯಾರೋ ಜೋರು ಮಾಡಿದ. ವಾದಿರಾಜ ಮಾಸ್ಕ್, ತಲೆಗೆ ಕಟ್ಟಿದ ಮುಂಡಾಸು ಎಲ್ಲ ತೆಕ್ಕೊಂಡು ಮುಖ ಒರೆಸಿಕೊಂಡು ಭಾರವಾದ ಹೆಜ್ಜೆ ಇಡ್ತಾ ನಳ್ಳಿಯ ಹತ್ರ ಬಂದ. ಮುಖ ತೊಳ್ಕೊಂಡು ನೀರು ಕುಡ್ದು ಕಟ್ಟೆಯಲ್ಲಿ ಕೂತ. ಕಣ್ಣಲ್ಲಿ ನೀರು ತುಂಬಿಕೊಂಡಿತು. ಎಂಥಾ ಬದುಕು ತನ್ನದು? ಇದಕ್ಕಿಂತ ಸಾಯುದೇ ಒಳ್ಳೇದು ಅಂತ ಎಣಿಸಿದ.

ಅಷ್ಟು ಹೊತ್ತಿಗೆ, 'ವಾದಿರಾಜ ಭಟ್ರೆ ನಮಸ್ಕಾರ' ಅಂತ ಹಿಂದಿನಿಂದ ಧ್ವನಿ ಕೇಳಿತು. ಯಾರಪ್ಪಾ ತನ್ನನ್ನು ಗುರ್ತು ಹಿಡಿದು ಬಿಟ್ರಲ್ಲಾ ಅಂತ ಎಣಿಸಿ ಕೂಡ್ಲೆ ಮಾಸ್ಕ್ ಹಾಕಿಕೊಂಡ. ಮೂವತ್ತು ಮೂವತ್ತೈದರ ವ್ಯಕ್ತಿ. 'ನನ್ನ ಗುರ್ತ ಸಿಗ್ಲಿಲ್ವಾ?' ಅಂತ ಎದುರಿಗೆ ನಿಂತು ಕೇಳಿದ. ವಾದಿರಾಜ ಪಿಳಿಪಿಳಿ ನೋಡಿದ. ಗೊತ್ತಾಗ್ಲಿಲ್ಲ ಅಂತ ತಲೆ ಅಲ್ಲಾಡಿಸಿದ. 'ನಾನು... ರಾಘವೇಂದ್ರ... ಎಲಿಮೆಂಟ್ರಿಯಲ್ಲಿರುವಾಗ ನಂಗೆ ಒಂದು ವರ್ಷ ಇಡೀ ಧರ್ಮಕ್ಕೆ ಊಟ ಹಾಕಿದ್ರಿ ಅಲ್ವಾ? ಅದೇ ಹುಡುಗ' ಅಂದ. ವಾದಿರಾಜನಿಗೆ ಆಶ್ಚರ್ಯ. 'ನೀನೇನು ಇಲ್ಲಿ? ಯೆಂತ ಮಾಡಿಕೊಂಡು ಇದ್ದೀ?' ಅಂತ ಕೇಳಿದ. ಅದಕ್ಕೆ ಅವ 'ಹೈಸ್ಕೂಲಿನಲ್ಲಿ ನಂಗೆ ಸರೀ ವಿದ್ಯೆ ಹತ್ಲಿಲ್ಲ. ಎಸ್ಸೆಸ್ಸೆಲ್ಸಿ ಫೆಯಿಲಾದೆ. ನಂತರ ಬಾಂಬೇಗೆ ಓಡಿ ಹೋಗಿ ಹೋಟ್ಲು ಸೇರಿಕೊಂಡಿದ್ದೆ. ನಂತರ ನಂದೇ ಒಂದು ಸಣ್ಣ ಹೋಟೇಲು ಇಟ್ಟುಕೊಂಡಿದ್ದೆ. ವ್ಯಾಪಾರ ತಕ್ಕ ಮಟ್ಟಿಗೆ ಇತ್ತು. ಲಾಕ್‌ಡೌನ್ ಘೋಷಣೆ ಆದ ನಂತ್ರ ಎಲ್ಲ ಬಂದ್ ಮಾಡಿ ಊರಿಗೆ ಬರ್ಬೇಕಾಗಿ ಬಂತು. ಇಲ್ಲಿ ಸರ್ಕಾರದವರು ನಡೆಸುವ ಈ ಕ್ಯಾಂಟೀನಿನ ಅಡುಗೆಯ ಮ್ಯಾನೇಜರ್ ಆಗಿ ಸೇರಿದೆ. ಎಂತಾದ್ರೂ ಕೆಲಸ ಬೇಕಲ್ವಾ? ಆಗ ಊಟ ಖಾಲಿ ಆಯ್ತು ಅಂತ ಬೈದದ್ದು ನಾನೇ. ನೀವು ಮುಖ ಒರೆಸಿಕೊಳ್ತಾ ಹೋಗುದು ನೋಡಿದೆ. ನಿಮಿಗೆ ಬೈದದ್ದು ಅಂತ ಗೊತ್ತಾಗಿ ನಂಗೆ ಭಾರೀ ಬೇಜಾರಾಯ್ತು. ಬನ್ನಿ... ನಂಗೆ ಅಂತ ತೆಗೆದಿಟ್ಟಿದ್ದ ಊಟದಲ್ಲಿ ನಿಮಿಗೆ ಸ್ವಲ್ಪ ಕೊಡ್ತೇನೆ. ಇನ್ನು ಮುಂದೆ ಪರಿಸ್ಥಿತಿ ಸರಿಯಾಗುವವರೆಗೆ ನೀವು ಎಲ್ಲಿ ಸಾ ಹೋಗ್ಬಾರ್ದು. ಇಲ್ಲೇ ಊಟ ತಿಂಡಿ ಮಾಡ್ಬೇಕು. ಅದಕ್ಕೆ ನಾನು ವ್ಯವಸ್ಥೆ ಮಾಡ್ತೇನೆ' ಅಂದ.

ವಾದಿರಾಜ ಅವನನ್ನು ಒಂದು ಕ್ಷಣ ನೋಡಿದ. ಆಮೇಲೆ ಅರಂಟಿ ಹಿಡ್ಕೊಂಡು ಮಗುವಿನಂತೆ ಕೂಗಿದ. ತಂಗೆ ಅಂತ ತೆಗೆದು ಇಟ್ಟಿದ್ದ ಊಟದಲ್ಲಿ ರಾಘವೇಂದ್ರ ಕೊಟ್ಟ ಪಾಲನ್ನು ತಿನ್ನುವಾಗ ವಾದಿರಾಜನಿಗೆ ಅದು ತುಂಬ ರುಚಿ ಅಂತ ಅನಿಸಿತು.

ಪ್ರತಿಕ್ರಿಯಿಸಿ: feedback@sudha.co.in